ಗೆ,

**ಕ್ಷೇತ್ರ ಶಿಕ್ಷಣಾಧಿಕಾರಿಗಳು,**

ದಕ್ಷಿಣ ವಲಯ –02,

ಪೂರ್ಣಯ್ಯ ಛತ್ರ ಕಟ್ಟಡ,

ಬಳೇ ಪೇಟೆ,

ಬೆಂಗಳೂರು.

ಮಾನ್ಯರೇ,

**ವಿಷಯ: 2017-2018ನೇ ಸಾಲಿನಲ್ಲಿ ಶಾಲೆಯಲ್ಲಿಯೇ ಸರ್ಕಾರಿ ಪಠ್ಯಪುಸ್ತಕ ಹಾಗೂ ಹೊಂದಿಕೊಳ್ಳುವ ಇತ್ಯಾದಿ ಪುಸ್ತಕಗಳನ್ನು ವಿತರಿಸುವ ಬಗ್ಗೆ.**

ಕರ್ನಾಟಕ ಸರ್ಕಾರದ ಅನುಮತಿಯೊಂದಿಗೆ ಕರ್ನಾಟಕ ಪಠ್ಯಪುಸ್ತಕ ಸಂಘ (ನೊಂದಣಿ) 100 ಅಡಿ ಸುತ್ತು ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು – 560085 ಕರ್ನಾಟಕ ಸರ್ಕಾರದ ಅನುಮತಿಯೊಂದಿಗೆ ಇದೇ ಸರ್ಕಾರವು ಆಯ್ಕೆ ಮಾಡಿರುವ ಪಠ್ಯಪುಸ್ತಕವನ್ನು ವಿತರಿಸುವುದನ್ನು ಇಲ್ಲ ಸ್ಮರಿಸುವುದು.

ಈ ಮೇಲಿನ ಸಂಘಕ್ಕೆ ಕ್ಯಾಮ್ಸ್ ಕರ್ನಾಟಕ ವತಿಯಿಂದ ದಿನಂಕ 21/07/2016 ರಂದು ಒಂದು ಮನವಿ ಪತ್ರವನ್ನು ಸಲ್ಲಿಸುತ್ತಾ, ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಅಂದರೆ, 2017-18 ರಿಂದ ಈ ಪುಸ್ತಕಗಳನ್ನು ಶಾಲೆಯ ಮೂಲಕ ವಿತರಿಸುವ ಏರ್ಪಾಡಿಗೆ ಬದಲಾಗಿ ಇತರೆ ವ್ಯವಸ್ಥೆಯನ್ನು ಮಾಡಿಕೊಂಡು, ಈ ವಿತರಣೆಯಿಂದ ಶಾಲೆಯ ಮುಖ್ಯಸ್ಥರ ಜವಾಬ್ದಾರಿಯನ್ನು ಮುಕ್ತಗೊಳಿಸಲು ಹಾಗೂ ಸರ್ಕಾರವೇ ನೇರವಾಗಿ ಪಾಲಕ ಪೋಷಕರಿಗೆ ತಲುಪಿಸಲು ವಿನಂತಿಸಲಾಗಿತ್ತು. ನಮ್ಮ ಸಂಸ್ಥೆಯು ಕ್ಯಾಮ್ಸ್ ಸಂಘದ ಸದಸ್ಯತ್ವ ಹೊಂದಿದ್ದು, ಅದರ ನಿಲುವಿನಂತೆ ನಾವು ಪ್ರತ್ಯೇಕ ಪತ್ರವನ್ನು ನಮ್ಮ ಬಿ.ಇ.ಓ. ಕಛೇರಿಗೆ ಬರೆದಿದ್ದು, ಅಲ್ಲದೆ ಇದೇ ರೀತಿಯ ವಿವರಣೆ ಹೊಂದಿರುವ ಮತ್ತೊಂದು ಪತ್ರವನ್ನು ಪ್ರಧಾನ ಕಾರ್ಯದರ್ಶಿ **ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ಸಚಿವಾಲಯ ವಿಭಾಗ, ಬಹುಮಹಡಿಯ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು ರವರಿಗೆ ಕೂಡ ದಿನಾಂಕ 28/07/2016** ರಲ್ಲಿ ಮನವಿ ಮಾಡಲಾಗಿತ್ತು.

**ಕರ್ನಾಟಕ ಪಠ್ಯಪುಸ್ತಕ ಸಂಘವು ಕೂಡ ಒಂದು ಖಾಸಗಿ ಕೇಂದ್ರವಾಗಿದೆ ಎಂಬುದನ್ನು ಇಲ್ಲಿ ತಿಳಿಯುವುದು.**

ಈ ಮೇಲಿನ ಮನವಿಗಳಿಗೆ ಯಾವುದೇ ರೀತಿಯ ಕ್ರಮ ಕೈಗೊಂಡ ಬಗ್ಗೆ ತಿಳಿಸದೇ ದಿನಾಂಕ 03/03/2017 ರಂದು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಡಿ 04 ಮಾಹಿತಿ 2017 ಬೆಂಗಳೂರು ದಿನಾಂಕ 03/03/2017ರಲ್ಲಿ ಖಂಡಿಕೆ 10 ಮತ್ತು 11ರ ಪ್ರಕಾರ ಕರ್ನಾಟಕ ಪಠ್ಯಪುಸ್ತಕ ಸಂಘವು ಪ್ರಕಟಿಸುವ ಪಠ್ಯಪುಸ್ತಕಗಳ ಹೊರತು ನಿರ್ದಿಷ್ಟ ಮಾರಾಟಗಾರರಿಂದ ಇತರೆ ನೋಟು ಪುಸ್ತಕ ಇತ್ಯಾದಿ ಖರೀದಿಸದಂತೆ ಅಥವಾ ಶಾಲೆಯಿಂದಲೇ ಖರೀದಿಸುವಂತೆ ಒತ್ತಾಯಿಸುವುದನ್ನು ನಿರ್ಭಂದಿಸಲಾಗಿದೆ.

ಈ ಆದೇಶ ಹೊರಡಿಸುವ ಮುನ್ನವೇ ನಮ್ಮ ಶಾಲೆಗೆ 2017-18ನೇ ಸಾಲಿಗೆ ಶಾಲೆಯಲ್ಲಿ ಮುಂದುವರಿಸುವ ವಿದ್ಯಾರ್ಥಿ/ನಿಯರಿಗೆ ಲಭ್ಯವಾಗಬೇಕಾದ ಪಠ್ಯಪುಸ್ತಕಗಳಿಗೆ ಪೂರಕವಾದ ನೋಟ್ ಪುಸ್ತಕ ಇತ್ಯಾದಿಗಳನ್ನು ಸಂಬಂಧಿಸಿದ ವರ್ತಕರಿಗೆ ವಿವರಣೆ ನೀಡಿ ಅವರೇ ಶಾಲೆಯಲ್ಲಿ ವಿತರಿಸಲು ಅನುಕೂಲ ಮಾಡಿಕೊಟ್ಟು ವಸ್ತುಗಳನ್ನು ಶಾಲೆಗೆ ತರಿಸಿಕೊಳ್ಳಲಾಗಿದೆ. ಸರ್ಕಾರ ತಡವಾಗಿ ತೆಗೆದುಕೊಂಡ ತೀರ್ಮಾನದ (03-03-2017) ಹಿನ್ನೆಲೆಯಲ್ಲಿ ಈ ವರ್ಷ ಇದರ ನಿರ್ದೇಶನವನ್ನು ಕಾರ್ಯರೂಪ ಮಾಡಲು ಅಡಚಣೆ ಇರುವುದರಿಂದ ಈ ಶೈಕ್ಷಣಿಕ ವರ್ಷಕ್ಕೆ ಮಾತ್ರ

(2017-2018) ಶಾಲೆಯಲ್ಲಿಯೇ ವಿದ್ಯಾರ್ಥಿ/ನಿಯರಿಗೆ ಪುಸ್ತಕ ಇತ್ಯಾದಿ ಪೂರಕವಸ್ತುಗಳನ್ನು ವಿತರಿಸಲು ಅನುಕೂಲ ಮಾಡಿಕೊಡಬೇಕೆಂದು ಮನವಿಸಲಾಗಿದೆ.

ಅದೇ ರೀತಿ ಆರ್.ಟಿ.ಇ. ಮಕ್ಕಳಿಗೆ ಉಚಿತವಾಗಿ ಕರ್ನಾಟಕ ಪಠ್ಯಪುಸ್ತಕಗಳನ್ನು ಹೊರತುಪಡಿಸಿ ಸಿ.ಬಿ.ಎಸ್.ಇ/ಐ.ಸಿ.ಎಸ್.ಇ. ಅಥವಾ ನರ್ಸರಿ ವಿಭಾಗದ ಪಠ್ಯಪುಸ್ತಕ ವಿತರಿಸುವ ಬಗ್ಗೆ ಯಾವುದೇ ಸ್ಪಷ್ಟರೀತಿ ಮಾರ್ಗಸೂಚಿ ಇಲ್ಲದಿರುವುದನ್ನು ಸ್ಪಷ್ಟೀಕರಿಸಬೇಕಾಗಿ ಕೇಳಕೊಳ್ಳುತ್ತೇವೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ

ಇಂದ,

ಶಾಲಾ ಹೆಸರು

ವಿಳಾಸ

**ಕಾರ್ಯದರ್ಶಿ/ಅಧ್ಯಕ್ಷರು**